ಸಾಕ್ಷಿಯನ್ನು ದಿಃ **25-08-2022** ರಂದು ಕರೆಸಲಾಯಿತು. ಪ್ರಮಾಣ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿಯರ ಪರ ಶ್ರೀ.ಎ ಹೆಚ್ ವಿ ವಕೀಲರಿಂದಃ

ಈ ಸಾಕ್ಷಿಯು ತನ್ನ ಪ್ರಮಾಣಪತ್ರವನ್ನು ಈಗಾಗಲೇ ಸಲ್ಲಿಸಿದ್ದು ಸದರಿ ಪ್ರಮಾಣಪತ್ರವನ್ನು ಆಕೆಯ ಮುಖ್ಯ ವಿಚಾರಣೆಯ ಪ್ರಮಾಣಪತ್ರವೆಂದು ಪರಿಗಣಿಸಲಾಯಿತು

ನನ್ನ ಮುಖ್ಯ ವಿಚಾರಣೆಗೆ ಪೂರಕವಾಗಿ ಈ ಕೆಳಗಿನ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ನೋಡಿ ಗುರುತಿಸಿದ್ದೇನೆ.

ದಿಃ **05-08-1968** ರ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ **1** ಎಂದು, ಅಸಲು ದಾವೆ **62/2016** ರಲ್ಲಿ ಸಲ್ಲಿಸಿದ ರಾಜಿ ಅರ್ಜಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ **2** ಎಂದು, ಅಸಲು ದಾವೆ **62/2016** ರ ಅಂತಿಮ ಡಿಕ್ರಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ **3** ಎಂದು, ದಿಃ **26-07-2017** ರ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ **4** ಎಂದು, ಹಾಸನ ಜಿಲ್ಲೆಯ ಪೊಲೀಸ್ ಅಧಿಕ್ಷರಿಕರಿಗೆ ಪೊಲೀಸ್ ಮಹಾ ನಿರೀಕ್ಷಕರು ವಾದಿ ಸಲ್ಲಿಸಿದ ಮನವಿಯ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿರುವ ಹಿಂಭರಹದ ಪ್ರತಿಯನ್ನು ನಿಪಿ **5** ಎಂದು, ಪೊಲೀಸ್ ವರಿಷ್ಟಾಧಿಕಾರಿಗಳು ಹಾಸನ ಇವರಿಗೆ ವಾದಿಯು ಸಲ್ಲಿಸಿದ ದೂರನ್ನು ನಿಪಿ **6** ಎಂದು, ಬೇಲೂರು ವೃತ್ತ ನಿರೀಕ್ಷಕರು ನೀಡಿದ ಹಿಂಭರವನ್ನು ನಿಪಿ **7** ಎಂದು, ಸರ್ವೆ ನಂ. **96** ಕ್ಕೆ ಸಂಬಂಧಪಟ್ಟ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ **8** ಎಂದು, ಮ್ಯೂಟೇಶನ್ ರಿಜಿಸ್ಟರ್ ಪ್ರತಿಯನ್ನು ನಿಪಿ **9** ಎಂದು, ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನಿಪಿ **10** ಎಂದು, ಸರ್ವೆ ನಂ. **96** ಕ್ಕೆ ಸಂಬಂಪಟ್ಟ **5** ಪಹಣಿಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿಪಿ **11** ರಿಂದ **15** ಎಂದು, **3** ಕಂಧಾಯ ರಶೀದಿಗಳನ್ನು ನಿಪಿ **16** ರಿಂದ **18,** ದಿಃ **20-12-2018** ರ ನೋಂದಣಿ ಆಧಾರ ಖುಲಾಸೆ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ **19** ಎಂದು, ಅಸಲು ದಾವೆ **62/2016** ರ ಅಂತಿಮ ಡಿಕ್ರಿಯ

ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ 20 (ನಿಪಿ 20 ರದ್ದುಡೀಕೃತ ಪ್ರತಿಯನು ನಿಪಿ-3 ಎಂದು ಈಗಾಗಲೇ ಹಾಜರುಪಡಿಸಲಾಗಿರುತ್ತದೆ) ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆ ಕಾಲಾವಕಾಶ ಕೋರಿದ್ದು ಕೊಡಲಾಗಿದೆ ಮುಂದೂಡಲಾಯಿತು.

(ಉಕ್ತಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣ ಯಂತ್ರದ ಮೂಲಕ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು.